

# ಬಂಜೆತನ

## ಸ್ತ್ರೀ ಮಾತ್ರ ಹೊಣೆಗಾರಳಲ್ಲ



**ಪ್ರಶ್ನೆ? ಪರಿಹಾರ**

ಡಾ॥ ಆಶಾ. ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್
9886915556/ 080-26673777

**ಮಕ್ಕಳಾಗಲಿಲ್ಲ ಎಂದರೆ ಅದಕ್ಕೆ ಕೇವಲ ಮಹಿಳೆಯರನ್ನು ಹೊಣೆ ಮಾಡುತ್ತಿದ್ದ ಕಾಲ ಈಗಿಲ್ಲ. ಎಲ್ಲ ರೀತಿಯಿಂದಲೂ ಆರೋಗ್ಯವಾಗಿರುವ ದಂಪತಿಗಳಲ್ಲೂ ಎಷ್ಟೋ ಸಮಸ್ಯೆಗಳು ಇರಬಹುದು. ಯಾರಲ್ಲಿ ದೋಷ ಇದ್ದರೂ ಅದಕ್ಕೆ 77ಪರಿಹಾರ ಹುಡುಕೋಣ. ಈ ಮನೋಭಾವದಿಂದ ಸಮಸ್ಯೆಯನ್ನು ನೋಡಿದರೆ ಪರಿಹಾರ ಸುಲಭ**

ಮಕ್ಕಳಾಗಲಿಲ್ಲ ಎಂದಾಗ ಅದಕ್ಕೆ ಕೇವಲ ಮಹಿಳೆ ಮಾತ್ರ ಕಾರಣಳು ಎಂದು ಅವಳನ್ನೇ ಹೊಣೆ ಮಾಡಿ, ಗಂಡಸಿಗೆ ಯಾವುದೇ ಪರೀಕ್ಷೆ ಮಾಡಿಸದೇ, ಕೆಲವೊಮ್ಮೆ ಅವನಿಗೆ ಇನ್ನೊಂದು ಮದುವೆ ಮಾಡುತ್ತಿದ್ದರು ಎನ್ನುವುದು ಹಳೆಯ ಮಾತು ಎಂದು ನಾವೇನಾದರೂ ಭಾವಿಸಿದ್ದರೆ ಅದು ತಪ್ಪು. ಈ ಕಾಲದಲ್ಲೂ ಇಂತಹ ಘಟನೆಗಳು ನಡೆಯುತ್ತವೆ. ಅಂತಹ ಒಂದು ಘಟನೆಯನ್ನು ವಿವರಿಸುವೆ.

ಅವಳ ಹೆಸರು ಅನ್ನಪೂರ್ಣ. ಕಾಲೇಜಿಗೆ ಹೋದವಳು. ಡಿಗ್ರಿ ಮುಗಿಸಿದ್ದಾಳೆ. ಅವಳು ಕನಕಪುರ ಸಮೀಪದ ಹಳ್ಳಿಯವನಾದ ಚೆನ್ನಪ್ಪನನ್ನು ವಿವಾಹವಾಗುತ್ತಾಳೆ. ಚೆನ್ನಪ್ಪನಿಗೆ ಸಾಕಷ್ಟು ಆಸ್ತಿ ಇದೆ. ಆದಾಯವೂ ಇದೆ. ಹೆಚ್ಚಿಗೆ ಓದಿರದ ಚೆನ್ನಪ್ಪನನ್ನು ಅನ್ನಪೂರ್ಣ ಸಂತೋಷದಿಂದಲೇ ವಿವಾಹವಾಗುತ್ತಾಳೆ. ಮದುವೆಯಾಗಿ ಎರಡು ವರ್ಷಗಳಾದರೂ ದಂಪತಿಗಳಿಗೆ ಮಕ್ಕಳಾಗಲಿಲ್ಲವೋ ಆಗ ಮನೆಯಲ್ಲಿ ಕಿರಿ ಕಿರಿ ಶುರು ಆಗುತ್ತದೆ. ಮಕ್ಕಳಾಗಲಿಲ್ಲ ಎಂದು ವೈದ್ಯರಲ್ಲಿಗೆ ತೋರಿಸುವುದಕ್ಕೆ ಹಿರಿಯರು ಒಪ್ಪುತ್ತಿರಲಿಲ್ಲ. ಬದಲಾಗಿ ಮನೆಯಲ್ಲಿ ಪೂಜೆ, ಜಾತಕ, ಜೋತಿಷ್ಯ, ದೇವಸ್ಥಾನಗಳಿಗೆ ಹೋಗುವುದು ಹೀಗೆ. ಇವಳಿಗೆ ಮಕ್ಕಳಾಗದಿರುವುದಕ್ಕೆ ನಿಜವಾದ ಕಾರಣ ಹುಡುಕದೇ ಕಂಡ ಕಂಡಲ್ಲಿ ಪರಿಹಾರ ಹುಡುಕಿದರು. ಈ ನಡುವೆ ಚೆನ್ನಪ್ಪ ಅವರ ತಮ್ಮನಿಗೆ ವಿವಾಹವಾಗಿ ವರುಷ ತುಂಬುವುದರೊಳಗೆ ತಮ್ಮನ ಹೆಂಡತಿ ಗರ್ಭಿಣಿ ಆದಳು. ಅನ್ನಪೂರ್ಣಳ ಸ್ಥಿತಿ ಈಗ ನರಕ ಸದೃಶವಾಯಿತು. ಬಸುರಿ ಆರತಿ, ಸೀಮಂತ ಯಾವುದೇ ಕಾರ್ಯಕ್ರಮಕ್ಕೂ ಅನ್ನಪೂರ್ಣಳನ್ನು ಕರೆಯುತ್ತಲೇ ಇರಲಿಲ್ಲ.

ಚೆನ್ನಪ್ಪನ ತಂದೆ ತಾಯಿಯರು ಅನ್ನಪೂರ್ಣಳಿಗೆ ಬಂಜೆಯ ಪಟ್ಟ ಕಟ್ಟಿದರು. ಅವಳ ಒರಗಿತ್ತಿಗೆ ಮಗು ಆದಾಗ ಆ ಮಗುವನ್ನು ಮುಟ್ಟಲೂ ಬಿಡಲಿಲ್ಲ. ಇವಳನ್ನು ಮನೆಯ ಕೆಲಸದವಳಂತೆ ನೋಡತೊಡಗಿದರು. ಚೆನ್ನಪ್ಪನೂ ಇವಳ ಬಗೆಗೆ ಪ್ರೀತಿಯಿಂದ ವರ್ತಿಸುವುದು ಹಾಗಿರಲಿ, ಇವಳನ್ನೇ ದೂರುವುದು. ಇವಳನ್ನು ಯಾವಾಗಲೂ ಅವಮಾನಿಸುವುದು ಇವೆಲ್ಲ ನಡೆಯುತ್ತಿತ್ತು. ಹೀಗಿದ್ದೂ ಯಾರೂ ವೈದ್ಯರಲ್ಲಿಗೆ ಹೋಗಲು ಬಿಡಲೇ ಇಲ್ಲ. ಏನಾಗಿದೆ ವೈದ್ಯರಲ್ಲಿ ಹೋಗಲು ಎನ್ನುತ್ತಿದ್ದರೆ ಹೊರತು, ತೋರಿಸಿಕೊಳ್ಳುವುದಕ್ಕೆ ಅನುವು ಮಾಡಲೇ ಇಲ್ಲ. ನಮ್ಮ ವಂಶದಲ್ಲಿ ಯಾರಿಗೂ ಹೀಗೆ ಮಕ್ಕಳಿಲ್ಲದ ಹಾಗೆ ಆಗಲಿಲ್ಲ. ನಮ್ಮ ಹುಡುಗ ಗಟ್ಟಿಮುಟ್ಟಾಗಿದ್ದಾನೆ. ಮಕ್ಕಳಾಗದಿರುವುದಕ್ಕೆ ಅನ್ನಪೂರ್ಣಳಲ್ಲೇ ತೊಂದರೆ ಇದೆ ಎಂದೇ ಹೇಳುತ್ತಿದ್ದರು.

ಅನ್ನಪೂರ್ಣಳ ವ್ಯಥೆ ಇಷ್ಟಕ್ಕೇ ನಿಲ್ಲಲಿಲ್ಲ. ಚೆನ್ನಪ್ಪನ ತಂದೆ ತಾಯಿ ಹಠ ಹಿಡಿದು ಅವನಿಗೆ ಇನ್ನೊಂದು ಮದುವೆ ಮಾಡಿದರು. ಬಡವರ ಮನೆಯ ಹುಡುಗಿಯನ್ನು ಕರೆತಂದು ಇವನಿಗೆ ಎರಡನೇ ಹೆಂಡತಿಯಾಗಿಸಿದರು. ಎರಡನೇ ಮದುವೆಯಾಗಿ ಒಂದು ವರ್ಷ ಕಳೆದರೂ ಅವಳಿಗೂ ಮಕ್ಕಳಾಗಲಿಲ್ಲ. ಆಗ ಇವರು ಸ್ವಲ್ಪ ಯೋಚಿಸತೊಡಗಿದರು. ಕನಕಪುರದಲ್ಲಿ ನಮ್ಮ ಕ್ಯಾಂಪ್ ನಡೆದಾಗ ಆ ಕ್ಯಾಂಪ್‌ಗೆ ಚೆನ್ನಪ್ಪನ ಸಂಬಂಧಿಕರು ಈ ದಂಪತಿಗಳನ್ನು ಕರೆದುಕೊಂಡು ಬಂದಿದ್ದರು. ಪ್ರಾರಂಭಿಕ ಪರೀಕ್ಷೆಯ ನಂತರ ಹೆಚ್ಚಿನ ತಪಾಸಣೆಗೆ ಇವರನ್ನು ಬೆಂಗಳೂರಿನಲ್ಲಿ ಇರುವ ನಮ್ಮ ಗರ್ಭಗುಡಿ ಐ.ವಿ.ಎಫ್. ಸೆಂಟರ್‌ಗೆ ಬರುವಂತೆ ಹೇಳಲಾಯಿತು. ಅವರು ಮೊದಲು ಬರಲು ಒಪ್ಪಿರಲಿಲ್ಲ. ಸಾಕಷ್ಟು ಆಪ್ತಸಮಾಲೋಚನೆಯ ನಂತರ ಬಂದರು. ಸುದೀರ್ಘ ತಪಾಸಣೆ ನಡೆಯಿತು. ಚೆನ್ನಪ್ಪನ ವೀರ್ಯವನ್ನು ತಪಾಸಣೆಗೆ ಕಳುಹಿಸಲು ಮೊದಲು ಒಪ್ಪಲಿಲ್ಲ. ಹೇಗೋ ಅವರ ಮನ ಒಲಿಸಿ, ವೀರ್ಯವನ್ನು ಪರೀಕ್ಷೆಗೆ ಕಳುಹಿಸಿದಾಗ; ಗೊತ್ತಗಿದ್ದೇನೆಂದರೆ ಚೆನ್ನಪ್ಪನ ವೀರ್ಯದಲ್ಲಿ ವೀರ್ಯಾಣುಗಳೇ ಇರಲಿಲ್ಲ. azoospermia ತೊಂದರೆ ಇತ್ತು. ಮೇಲ್ನೋಟಕ್ಕೆ ಆರೋಗ್ಯದಿಂದ, ಸದೃಢವಾಗಿ ಕಾಣುವ ಚೆನ್ನಪ್ಪನಿಗೆ ಇಂತಹ ತೊಂದರೆ ಇರಬಹುದು ಎನ್ನುವುದು ಗೊತ್ತಾಗುವುದೇ ಇಲ್ಲ. ಅನ್ನಪೂರ್ಣಳಲ್ಲಿ ಯಾವುದೇ ತೊಂದರೆಯೂ ಇರಲಿಲ್ಲ. ಹೀಗೆ ತೊಂದರೆ ಇಟ್ಟುಕೊಂಡ ವ್ಯಕ್ತಿಗೆ ಮದುವೆ ಮೇಲೆ ಮದುವೆ ಮಾಡಿದರೆ ಮಕ್ಕಳಾಗುವುದು ಹೇಗೆ? ಚೆನ್ನಪ್ಪನಿಗೆ ವೀರ್ಯಾಣು ಉತ್ಪತ್ತಿ ಹೆಚ್ಚಾಗುವಂತೆ ಚಿಕಿತ್ಸೆ ನೀಡಲಾಯಿತು.

ಸಮಾಜದಲ್ಲಿ ಇರುವ ತಪ್ಪು ತಿಳುವಳಿಕೆಯಿಂದ, ಕೇವಲ ಮಹಿಳೆಯರನ್ನು ಹೊಣೆ ಮಾಡುವ ಮನೋಭಾವನೆಯಿಂದ, ಮುಕ್ತವಾದ ತಿಳುವಳಿಕೆಯ ಕೊರತೆಯಿಂದ ಅನ್ನಪೂರ್ಣಳಂತಹ ಎಷ್ಟು ಹೆಣ್ಣುಮಕ್ಕಳು ಸಂಕಷ್ಟಕ್ಕೀಡಾಗುತ್ತಿದ್ದಾರೋ. ವ್ಯಕ್ತಿ ತನ್ನ ದೋಷವನ್ನು ಒಪ್ಪಿಕೊಳ್ಳುವುದು ಮತ್ತು ಅದಕ್ಕಿರುವ ಪರಿಹಾರವನ್ನು ಕಂಡುಕೊಳ್ಳುವುದರಿಂದ ಇಡೀ ಸಮಸ್ಯೆಯನ್ನು ಬಗೆಹರಿಸಬಹುದಿತ್ತು. ಬಂಜೆತನಕ್ಕೆ ಮಹಿಳೆಯರನ್ನು ಹೊಣೆ ಮಾಡುವ ಮನಸ್ಥಿತಿ ಈಗ ಬದಲಾಗುತ್ತಿದೆ. ಆದರೂ ಇನ್ನೂ ಸಂಪೂರ್ಣವಾಗಿ ಹೋಗಿಲ್ಲ. ಮಕ್ಕಳಾಗಲಿಲ್ಲ ಎಂದರೆ ಇಬ್ಬರಲ್ಲೂ ದೋಷ ಇರಬಹುದು. ಯಾರಲ್ಲಿ ದೋಷ ಇದ್ದರೂ ಅದಕ್ಕೆ ಪರಿಹಾರ ಹುಡುಕೋಣ. ಮಗುವಿಗಾಗಿ ಇಬ್ಬರೂ ಹಂಬಲಿಸುವಾಗ, ಇದಕ್ಕೆ ಇಬ್ಬರೂ ಹೊಣೆ ಎನ್ನುವುದು ಅರಿತಾಗ ಇಲ್ಲಿ ಹೆಚ್ಚು ಕಡಿಮೆ ಎನ್ನುವ ಭಾವನೆ ಎಲ್ಲಿ? ಮಕ್ಕಳಾಗಲಿಲ್ಲ ಎನ್ನುವ ತೊಂದರೆಗೆ ಇಬ್ಬರೂ ಪರೀಕ್ಷೆ ಮತ್ತು ಚಿಕಿತ್ಸೆ ಪಡೆಯಲು ಮುಂದಾಗಲೇ ಬೇಕು. ಇದು ಒಂದು ಅರಿವಾಗಿ ಹಬ್ಬಬೇಕು.

### ಪ್ರಶ್ನೆ ಪರಿಹಾರ

**ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು?**

ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲಿ ತಜ್ಞ ವೈದ್ಯರು ಉತ್ತರಿಸುತ್ತಾರೆ.

ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ 210/ಎ, 50 ಅಡಿ ರಸ್ತೆ, 14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು–560 050

ದೂರವಾಣಿ/ಎಸ್‌ಎಂಎಸ್: 98869 15556